

## ಶ್ರದ್ಧಾ ಉತ್ಸಾಹ

'ಸಾಹೊ' ಚಿತ್ರದಲ್ಲಿ ಪ್ರಭಾಸ್ ಜತೆಗೆ ನಟಿಸುತ್ತಿರುವ ಶ್ರದ್ಧಾ ಕಪೂರ್, 'ಪದ್ಮಾವತಿ' ಚಿತ್ರದ ವಿವಾದದಲ್ಲಿ ನಟಿ ದೀಪಿಕಾ ಪಡುಕೋಣೆ ಪರವಾಗಿ ಗಟ್ಟಿಯಾಗಿ ಮಾತನಾಡಿದ್ದಾಳೆ. ಬೇರೆ ನಟಿಯವರೆಲ್ಲ ಬಾಯಿ ಮುಚ್ಚಿ ಕುಳಿತಿರುವಾಗ ಶ್ರದ್ಧಾ ಧೈರ್ಯ ವಹಿಸಿದ್ದು ಬಾಲಿವುಡ್‌ನಲ್ಲಿ ಮೆಚ್ಚುಗೆ ಗಳಿಸಿದೆ. ಈ ಮಧ್ಯೆ 'ಹಸೀನಾ ಪಾರ್ಕರ್' ಚಿತ್ರ ದಯನೀಯವಾಗಿ ಸೋತಿರುವ ಕುರಿತೂ ಶ್ರದ್ಧಾ ಎಚ್ಚರದಿಂದ ಪ್ರತಿಕ್ರಿಯೆ ನೀಡಿದ್ದಾಳೆ. 'ಚಿತ್ರರಂಗದಲ್ಲಿ ಏಳು ಬೀಳು ಇದ್ದಿದ್ದೇ. ನನ್ನ ಆರಂಭದ ಚಿತ್ರಗಳೆಲ್ಲವೂ ಚೆನ್ನಾಗಿ ಓಡಿವೆ. ಒಳ್ಳೆಯ ಹೆಸರು ತಂದಿವೆ. ಈಗ 2–3 ಚಿತ್ರಗಳು ಬಾಕ್ಸಾಫೀಸ್‌ನಲ್ಲಿ ಸೋತರೆ ಅದರಿಂದ ಹೆಚ್ಚಿನ ವ್ಯತ್ಯಾಸವೇನೂ ಆಗುವುದಿಲ್ಲ. ಸದ್ಯಕ್ಕಂತೂ ನಾನು ಬ್ಯುಸಿ. ಬೇರೆ ವಿಚಾರಗಳಲ್ಲಿ ಮುಳುಗಿ ದುಃಖಿಸಲು ಸಮಯವಿಲ್ಲ' ಎಂದಿದ್ದಾಳೆ ಶ್ರದ್ಧಾ.

ಅಂದ ಹಾಗೆ ಶ್ರದ್ಧಾ ನಟಿಸುತ್ತಿರುವ ಇನ್ನೊಂದು ಚಿತ್ರ ಖ್ಯಾತ ಬ್ಯಾಡ್ಮಿಂಟನ್ ಆಟಗಾರ್ತಿ ಸೈನಾ ನೆಹ್ವಾಲ್ ಜೀವನ ಆಧರಿತ ಕಥೆಯುಳ್ಳ ಚಿತ್ರ. ಈ ಪಾತ್ರದ ಬಗ್ಗೆ ಶ್ರದ್ಧಾ ತುಂಬು ಉತ್ಸಾಹದಿಂದ ಇದ್ದಾಳೆ. ಬ್ಯಾಡ್ಮಿಂಟನ್ ಅಭ್ಯಾಸ ಮಾಡುವಾಗ ಇತ್ತೀಚೆಗೆ ಶ್ರದ್ಧಾ ಕಾಲಿಗೆ ಗಾಯವಾಗಿತ್ತಂತೆ. ಆದರೆ ಪಾತ್ರದಲ್ಲಿ ಶ್ರದ್ಧಾಳ ಶ್ರದ್ಧೆ ಮಾತ್ರ ಕಡಿಮೆಯಾಗಿಲ್ಲ. 'ಇಂತಹ ಸವಾಲೆಸೆಯುವ ಪಾತ್ರಗಳಿಗಾಗಿ ನಾನು ಎಷ್ಟು ಬೇಕಾದರೂ ಕಷ್ಟ ಪಡಬಲ್ಲೆ' ಎಂದಿದ್ದಾಳೆ ಆಕೆ.

## ದುಬಾರಿ ಪ್ರಭಾಸ್

ಪ್ರಭಾಸ್ ಬಾಲಿವುಡ್ ಪ್ರವೇಶಕ್ಕೆ ಎಷ್ಟೊಂದು ಅಡ್ಡಿಗಳು! 'ಬಾಹುಬಲಿ'ಯಂತಹ ಭಾರತೀಯ ಚಿತ್ರಜಗತ್ತಿನ ಅತಿದೊಡ್ಡ ಸೂಪರ್ ಹಿಟ್ ಸಿನಿಮಾ ಬಂದ ಬಳಿಕ ಪ್ರಭಾಸ್ ಆ ಚಿತ್ರದ ಖ್ಯಾತಿಯ ಬೆನ್ನೇರಿ ಕನಿಷ್ಠ ನಾಲ್ಕೈದು ಹಿಂದಿ ಚಿತ್ರಗಳಿಗಾದರೂ ಸಹಿ ಹಾಕಿಯಾರು ಎನ್ನುವ ನಿರೀಕ್ಷೆ ಅಭಿಮಾನಿಗಳಿಗೆ ಇತ್ತು. ಅದಕ್ಕೆ ತಕ್ಕಂತೆ ಪ್ರಭಾಸ್ ಹಾಕಿಕೊಂಡು ಚಿತ್ರ ನಿರ್ಮಿಸುವ ಬಗ್ಗೆ ಹಲವು ನಿರ್ದೇಶಕ– ನಿರ್ಮಾಪಕರು ಆಸಕ್ತಿ ತೋರಿಸಿದ್ದರು. ಬಾಲಿವುಡ್‌ನ ಜನಪ್ರಿಯ ನಿರ್ದೇಶಕ ಕರಣ್ ಜೋಹರ್ ಅಂತೂ, ಟಿವಿ ಚಾನೆಲ್‌ನಲ್ಲಿ 'ಶೀಘ್ರವೇ ಪ್ರಭಾಸ್ ಜೊತೆಗೆ ಕೆಲಸ ಮಾಡುತ್ತೇನೆ' ಎಂದು ಅನೌನ್ಸ್ ಕೂಡಾ ಮಾಡಿದ್ದರು. ಆದರೆ ಈಗ ಬಂದಿರುವ ಸುದ್ದಿ ನೋಡಿದರೆ ಪ್ರಭಾಸ್ ಸಹಿ ಹಾಕಿಸಿಕೊಳ್ಳಲು ಕರಣ್ ಕೂಡಾ ಹಿಂಜರಿಯುತ್ತಿದ್ದಾರೆ. ಅದಕ್ಕೆ ಮುಖ್ಯ ಕಾರಣ ಪ್ರಭಾಸ್ ಬಯಸುವ ದೊಡ್ಡ ಮೊತ್ತದ ಸಂಭಾವನೆಯಂತೆ.

ತೆಲುಗು ಚಿತ್ರರಂಗದಲ್ಲಿ ಪ್ರಭಾಸ್‌ಗೆ ಚಿತ್ರವೊಂದಕ್ಕೆ 20 ಕೋಟಿ ರೂಪಾಯಿ ಸಂಭಾವನೆ ಸಿಗುತ್ತಿದೆ ಎನ್ನುವುದು ಸುದ್ದಿ. ಕರಣ್ ಜೋಹರ್ ತನ್ನ ಹಿಂದಿ ಚಿತ್ರಕ್ಕೆ ಅಷ್ಟು ಕೊಡಲು ಹಿಂಜರಿಯುತ್ತಿದ್ದಾರಂತೆ. ಪ್ರಭಾಸ್ ಅದಕ್ಕಿಂತ ಕಡಿಮೆ ಸಂಭಾವನೆಗೆ ಒಪ್ಪುತ್ತಿಲ್ಲವಂತೆ. ಹಿಂದಿ ನಿರ್ಮಾಪಕರ ಪ್ರಕಾರ, ದಕ್ಷಿಣ ಮೆಗಾಸ್ಟಾರ್ ರಜನಿಕಾಂತ್ ಕೂಡಾ ಹಿಂದಿಯಲ್ಲಿ ಅಷ್ಟೊಂದು ಸಂಭಾವನೆ ಈವರೆಗೆ ಪಡೆದಿಲ್ಲ. ಸದ್ಯಕ್ಕಂತೂ ಪ್ರಭಾಸ್ ತನ್ನ ತ್ರಿಭಾಷಾ ಚಿತ್ರ 'ಸಾಹೊ'ದಲ್ಲಿ ಬ್ಯುಸಿ. ಈ ಚಿತ್ರ ಹಿಂದಿ ಮತ್ತು ತೆಲುಗು ಭಾಷೆಗಳಲ್ಲಿ ನಿರ್ಮಾಣವಾಗುತ್ತಿದ್ದು, ತಮಿಳಿಗೆ ಡಬ್ ಆಗುತ್ತದಂತೆ. ಹಿಂದಿಯಲ್ಲಿ ಈ ಚಿತ್ರ ಬಿಡುಗಡೆಯಾದ ಬಳಿಕ ಮತ್ತೊಂದು ಹಿಂದಿ ಚಿತ್ರಕ್ಕೆ ಪ್ರಭಾಸ್ ಸಹಿ ಹಾಕಬಹುದೆ ಕಾದು ನೋಡಬೇಕು.

■ ಬಿಂದು

